Govt. of Karnataka [C.R.P. 67

Deposition Sheets (R.P. No. 57)

# ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ ,

## ಪ್ರಕರಣ ಸಂಖ್ಯೆ: 74 /2019

ದಿನಾಂಕ: **19-12-2022** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| | | | |
|---|---|---|---|
| ಸಿಡಬ್ಲ್ಯೂ: | 5 | ಪಿಡಬ್ಲ್ಯೂ | 7 |
| ಹೆಸರು | ನರಸಿಂಹಮೂರ್ತಿ | | |
| ತಂದೆ / ಗಂಡನ ಹೆಸರು | ಉಗ್ಗಪ್ಪ | | |
| ವಯಸ್ಸು | 30 | | |
| ಉದ್ಯೋಗ | ಟೈಲರ್ | | |
| ವಾಸ | ಬರಗೂರು ಗ್ರಾಮ | | |

ಮುಖ್ಯ ವಿಚಾರಣೆ: ಎ ಪಿ ಪಿ ರವರಿಂದ:

ದಿ:12-10-2018 ರಂದು ಬರಗೂರು ಕ್ರಾಸ್ ನಲ್ಲಿ ಸಂಜೆ 7.30 ರಲ್ಲಿ ಕೆಎಸ್ ಆರ್ ಟಿ ಸಿ ಮತ್ತು ಬಸ್ ನ ನಡುವೆ ಅಪಘಾತವಾಗಿರುತ್ತದೆ. ಅಪಘಾತ ಪಡಿಸಿದ ಬಸ್ ನಂ. ಕೆಎ-06-ಎಫ್-1036 ಆಗಿರುತ್ತದೆ. ಆರೋಪಿ ತನ್ನ ಬಸ್ ನ್ನು ವೇಗವಾಗಿ ಚಾಲನೆ ಮಾಡಿಕೊಳ್ಳಲು ಹೋಗಿ ಡಿಕ್ಕಿ ಹೊಡೆದ ಪರಿಣಾಮ ಅಪಘಾತದಲ್ಲಿ ಹನುಮಂತರಾಯಪ್ಪ ಹಾಗೂ ರಮೇಶ್ ನವರಿಗೆ ಎಡಗಾಲಿಗೆ ಪೆಟ್ಟು ಬಿದ್ದಿರುತ್ತದೆ. ಅಷ್ಟರಲ್ಲಿ ಆಂಬುಲೆನ್ಸ್ ಬಂದು ಶಿರಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಸಂಜಯ್ ಗಾಂಧಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಬಸ್ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ. ಆರೋಪಿಯನ್ನು ನಾನು ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ನನಗೆ ವಾಹನ ಚಾಲನಾ ಪರವಾನಗಿ ಇದೆ. ಅದರ ನಂ. ನನಗೆ ಗೊತ್ತಿಲ್ಲ. ಗಾಯಾಳು ರಮೇಶ ನನ್ನ ಸಂಬಂದಿ. ಅಪಘಾತ ವಾದ ದಿನ ಯಾವ ವಾರ ನನಗೆ ಗೊತ್ತಿಲ್ಲ. ಅಪಘಾತವಾದಾಗ ನಾನು ಬರಗೂರಿನಲ್ಲಿದ್ದೆ. ಅಪಘಾತ ಸ್ಥಳದಿಂದ ಬರಗೂರಿಗೆ 7 ಕಿ.ಮೀ ದೂರವಿದೆ. ಬರಗೂರಿನಿಂದ ಸ್ಥಳಕ್ಕೆ ಬರಲು 15 ನಿ. ಬೇಕಾಗುತ್ತದೆ ಎಂದರೆ ಸರಿ. ಅಪಘಾತವಾದ ಸ್ಥಳ ದಿಂದ ಸ್ವಲ್ಪ ಮುಂದೆ ವೀರಬೊಮ್ಮನ ಹಳ್ಳಿ ಗೇಟ್ ಇದೆ. ಅಮರಾಪುರ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ, ಸದರಿ ರಸ್ತೆ ಯಲ್ಲಿ ಸದಾ ಕಾಲ ವಾಹನಗಳು ಚಲಿಸುತ್ತವೆ ಎಂದರೆ ಸರಿ. ಅಪಘಾತ ಸ್ಥಳದಲ್ಲಿ ತಂಗುದಾಣ ಇದೆ ಎಂದರೆ ಸರಿ. ಅಪಘಾತವಾದಾಗ 7.30 ಗಂಟೆಯಾಗಿತ್ತು , ಕತ್ತಲಾಗಿತ್ತು ಎಂದರೆ ಸರಿ.

ರಮೇಶ್ ಆ ದಿನ ಬೈಕ್ ನ್ನು ಚಾಲನೆ ಮಾಡಿಕೊಂಡು ಬಂದಿರುತ್ತಾನೆ. ರಮೇಶ್‌ನಿಗೆ ಮದ್ಯಪಾನ ಮಾಡುವ ಹವ್ಯಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅಪಘಾತವಾದ ಸ್ಥಳದ ಚಕ್ಕುಬಂದಿ ಪೂಃ ಬರಗೂರು ರಸ್ತೆ , ಪಃ ತಂಗುದಾಣ , ಉಃ ವೀಬೊಮ್ಮನಹಳ್ಳಿ ಗೇಟ್ , ದಃ ಶಿರಾ. ಸದರಿ ಕ್ರಾಸ್ ನಲ್ಲಿ ಎಲ್ಲಾ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ಆ ದಿನ ಸರ್ಕಾರಿ ಬಸ್ ಮುಖ್ಯ ರಸ್ತೆಯಿಂದ ಬರಗೂರು ರಸ್ತೆಯಲ್ಲಿ ಇತ್ತು ಎಂದರೆ ಸರಿ.

ನಾನು ಬರಗೂರಿನಲ್ಲಿದ್ದುದರಿಂದ ಯಾರ ತಪ್ಪಿನಿಂದ ಅಪಘಾತವಾಗಿತ್ತು ಎಂದು ನಾನು ನೋಡಿಲ್ಲ ಎಂದರೆ ಸರಿ. ರಮೇಶ್ ನನ್ನ ರಕ್ತ ಸಂಬಂದಿಯಾಗಿದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಈ ದಿನವೇ ನ್ಯಾಯಾಲಯಾದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.

Accused No. 6,9,14,15,19,23 absent.
EP filed allowed. Remaining accused present.
C.W.1 to 6 present. Examined as P.W.1 to 6 Ex. P-1, Ex.P -7, marked. Cw 1 to 6 material witness are turned hostile.
L/APP prays to issue summons to the other witnesses. Prayer rejected as no purpose will be served. The other prosecution witnesses are dropped. The evidence of prosecution is closed.
As no incriminating evidence appeared U/sec.313 of Cr.P.C is dispensed. Arguments heard.
Call on for judgment by: 01-06-2022.

ACJ. & JMFC, Sira.